

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಮಠದೊಳಗಣ ಬೆಕ್ಕು ಇಲಿಯ ಕಂಡು!...

"ಗುರುವಿಗಿಂ ಪರವಿಲ್ಲವೋ, ಸದ್ಗುರುವಿಗಿಂ ಮಿಗಿಲಿಲ್ಲವೋ ಎನ್ನುವ ಕಾಲವು ಹೋಯಿತು. ಗುರು ಎಂಬುದೊಂದು ಶಬ್ದ ಮಾತ್ರ ಉಳಿಯಿತು. ಗುರುವಿನ ಅಂತಸ್ತು ಹೋಯಿತು. ಗುರುಗಳು ಸ್ತ್ರೀಯರ ಪದತಳದಲ್ಲಿ ಬಿದ್ದರು. ಯಾರ್‍ಯಾರೆಂದು ಹೇಳೋಣ? ಎಲ್ಲರೂ ವ್ಯಭಿಚಾರಿಗಳು. ನಾನು ಕಂಡ ಹಾಗೆ ಎಲ್ಲರೂ ದುರಾಚಾರಿಗಳು. ಮಠಗಳಲ್ಲಿ ಸಂಭೋಗ, ತೊಟ್ಟಿಲು ಕಟ್ಟುವುದು ಇತ್ಯಾದಿ ಗೃಹಸ್ಥಧರ್ಮ ಕಾರ್ಯಗಳು ನಡೆಯುವಾಗ ಆ ಮಠಗಳು ಪಾಪಕ್ಷೇತ್ರವಾಗುವುದರಲ್ಲಿ ಸಂದೇಹವಿಲ್ಲ. ಆ ಪಾಪಕ್ಷೇತ್ರಗಳಲ್ಲಿ ಬಂದು ನಮಸ್ಕರಿಸುವ ಶಿಷ್ಯವರ್ಗಕ್ಕೆ ಕಲ್ಯಾಣವಾಗುತ್ತೆಂಬುದು ಶುದ್ಧ ಅಸಂಗತ. ಶಿವ ಶಿವ! ಜಗತ್ತಿನ ಸೂತ್ರವೆಲ್ಲಾ ವ್ಯಭಿಚಾರಿಗಳ ಕೈಯಲ್ಲಿದೆ. ವ್ಯಭಿಚಾರಿಗಳು ಗುರುಗಳೆಂದು ಹೇಳಿಸಿಕೊಳ್ಳಲು ನಾಚಿಕೆಗೊಳ್ಳುವುದಿಲ್ಲವಲ್ಲಾ! ಹರ ಹರ! ಶಿವ ಶಿವ! ಈಗಿನ ಸಂನ್ಯಾಸಿಗಳಿಂದ ಜಗತ್ತಿಗೆ ಭಯಂಕರವಾದ ಹಾನಿಯಾಗಿದೆ. ಸಂನ್ಯಾಸಿಗಳು ಕೆಡಲು ಭಕ್ತರಲ್ಲಿರುವ ಅಜ್ಞಾನವೇ ಕಾರಣ. ನಿರಕ್ಷರಕುಕ್ಷಿಗಳೂ ವಿಷಯಕೂಪದಲ್ಲಿ ಬೆಳೆದವರೂ ಮತ್ತು ವಿಷಯದಲ್ಲೇ ತೊಳಲಿ ಬಳಲಿದವರೂ ಗುರುಗಳಾದರೆ ಯಾವ ಜಗತ್ತು ಉದ್ಧಾರವಾಗುತ್ತದೆ? **ಗುರುಗಳಾಗುವುದೆಂದರೆ ನಾಟಕದಲ್ಲಿ ವೇಷ ಹಾಕಿಕೊಂಡು ಪಾರ್ಟು ಮಾಡುವುದೆಂದು** ಜನರು ಭಾವಿಸಿರುವಂತೆ ತೋರುತ್ತದೆ. ಶಿವ ಶಿವ! ದನ ಕಾಯುವವರೆಲ್ಲಾ, ಸುಳ್ಳು ಹೇಳುವವರೆಲ್ಲಾ, ವಿಧವಾಪ್ರಿಯರೆಲ್ಲಾ ನಿನ್ನ ಹೆಸರಿನಿಂದ ದೇಶದಲ್ಲಿ ಮೆರೆಯುತ್ತಾರಲ್ಲ! ಹೆಂಗಸೆಂದರೆ ಬಾಯ್ತೆರೆಯುತ್ತಾ ಇದೆ ಈ ಗುರುವರ್ಗ. ನೀಚ ಗುರುವರ್ಗ, ಅಧಮ ಗುರುವರ್ಗ, ಪತಿತ ಗುರುವರ್ಗ, ನಿನಗೆ ಧಿಕ್ಕಾರ, ಧಿಕ್ಕಾರ, ಧಿಕ್ಕಾರ!"

ಈ ಮಾತುಗಳನ್ನು ಯಾರು ಯಾವಾಗ ಎಲ್ಲಿ ಬರೆದಿದ್ದಾರೆಂದು ನಿಮಗೆ ಗೊತ್ತೇ? ಇವು ನಿನ್ನೆ ಮೊನ್ನೆ ನಡೆದ ಘಟನೆಯನ್ನು ಕುರಿತು ಬರೆದ ಮಾತುಗಳು ಖಂಡಿತಾ ಅಲ್ಲ. ಇದನ್ನು ಬರೆದವರು ಯಾವ ಬಂಡಾಯ ಸಾಹಿತಿಗಳೂ ಅಲ್ಲ. ಮಠದ ಚೌಕಟ್ಟಿನೊಳಗಿದ್ದುಕೊಂಡೇ ಮಠಾಧೀಶರೊಬ್ಬರು ತಮ್ಮ 23-24 ರ ಯುವ ವಯಸ್ಸಿನಲ್ಲಿ ಇತರೆ ಮಠಾಧೀಶರ ಖಾಸಗಿ ಜೀವನವನ್ನು ಕಂಡು ಬೇಸತ್ತು ಇಂತಹ ಕಟುವಾದ ಮಾತುಗಳನ್ನು ಬರೆದಿದ್ದಾರೆಂದರೆ ನಿಮಗೆ ಆಶ್ಚರ್ಯವಾಗದಿರದು. ನಮ್ಮ ಈ ಅಂಕಣವನ್ನು ಆರಂಭದಿಂದಲೂ ತಪ್ಪದೇ ಓದುತ್ತಾ ಬಂದಿರುವ ಸಹೃದಯ ಓದುಗರಿಗೆ ನೆನಪಾಗಬಹುದು. ಹೀಗೆ ಬರೆದ ಮಠಾಧೀಶರು ಬೇರೆ ಯಾರೂ ಅಲ್ಲ, ನಮ್ಮ ಪರಮಾದರಣೀಯ ಗುರುವರ್ಯರಾದ ಲಿಂಗೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು. ಮಠದ ಮೂಲೆಯೊಂದರಲ್ಲಿ ಧೂಳು ತಿಂದು ಬಿದ್ದಿದ್ದ ಇಲ್ಲಿಗೆ ಸುಮಾರು 72 ವರ್ಷಗಳ ಹಿಂದೆ ಅಂದರೆ 1938 ರಲ್ಲಿ ಅವರು ಬರೆದಿಟ್ಟಿದ್ದ ದಿನಚರಿಯನ್ನು (Diary) ನಾವು ಸಂಶೋಧಿಸಿ, ಸಂಪಾದಿಸಿ "ಆತ್ಮನಿವೇದನೆ" ಎಂಬ ಹೆಸರಿನಲ್ಲಿ ಪ್ರಕಟಿಸಿದ ಪುಸ್ತಕದಿಂದ ಹೆಕ್ಕಿ ತೆಗೆದ ಸತ್ವಯುತವಾದ ಮಾತುಗಳಿವು.

ಕಳೆದ ವಾರ ನಡೆದ ಘಟನೆಯನ್ನು ಕುರಿತು ಇದಕ್ಕಿಂತ ಹೆಚ್ಚಿನ ಸಶಕ್ತ ಶಬ್ದಗಳಲ್ಲಿ ಮತ್ತು ಸುಸಂಸ್ಕೃತ ಭಾಷೆಯಲ್ಲಿ ಯಾರೂ ಪ್ರತಿಕ್ರಿಯಿಸಲು ಸಾಧ್ಯವಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಕೊನೆಯ ಸಾಲಿನಲ್ಲಿ ಬರುವ 'ವಿಧವಾಪ್ರಿಯರೆಲ್ಲಾ' ಎಂಬ ಶಬ್ದದ ಜೊತೆಗೆ 'ಚಿತ್ರತಾರೆಯರ ಪ್ರಿಯಕರರೆಲ್ಲಾ' ಎಂದು ಜೋಡಿಸಿದರೆ ಸಾಕು. ಉಳಿದಂತೆ ಎಲ್ಲ ಮಾತುಗಳೂ ನಿನ್ನೆ ಮೊನ್ನೆ ನಡೆದ ಘಟನೆಯನ್ನೇ ಕುರಿತು ಬರೆದಂತಿವೆ. ಸಾಮಾಜಿಕ, ಆಧ್ಯಾತ್ಮಿಕ ಚಿಂತನೆಗಳಿಂದ ಕೂಡಿದ ನೈಜ ಕಳಕಳಿಯ ಸಾತ್ವಿಕ ಆಕ್ರೋಶವನ್ನೊಳಗೊಂಡ ಈ ಗ್ರಂಥವನ್ನು ಮೆಚ್ಚಿ 'ಮಠದ ಸ್ವಾಮಿಗಳಿಗೆ ಒಂದು ಕೈಪಿಡಿ' ಎಂಬ ಶಿರೋನಾಮೆಯಲ್ಲಿ ಪ್ರಸಿದ್ಧ ಸಾಹಿತಿಗಳಾದ ಹಾ.ಮಾ. ನಾಯಕರು ಪ್ರಜಾವಾಣಿಯ 'ಸಂಪ್ರತಿ'ಯಲ್ಲಿ ಬಹಳ ಹಿಂದೆಯೇ ಬರೆದಿದ್ದರು. 'ಆಧ್ಯಾತ್ಮ ಜಿಜ್ಞಾಸುಗಳಿಗೆ ಮತ್ತು ಯಾವುದೇ ಮಠದ ಸ್ವಾಮಿಗಳಾಗುವವರಿಗೆ ಈ ಡೈರಿಯು ಒಂದು ಕೈಪಿಡಿಯಾಗಬಲ್ಲದು' ಎಂಬ ನಮ್ಮ ಮಾತಿಗೆ ಪೂರಕವಾಗಿ 'ಈಗಾಗಲೇ ಸ್ವಾಮಿಗಳಾಗಿರುವವರೂ ಇದನ್ನು ಓದುವುದು ಒಳ್ಳೆಯದು. ಕನ್ನಡದ ಆಧ್ಯಾತ್ಮಿಕ ಸಾಹಿತ್ಯಕ್ಕೆ ಇದೊಂದು ಸ್ವೋಪಜ್ಞ ಕೊಡುಗೆ' ಎಂದು ಹಾ.ಮಾ.ನಾ ಬಣ್ಣಿಸಿದ್ದರು.

ಇಂತಹ ಪ್ರಕರಣಗಳನ್ನು ವಿಚಾರವಂತರು ನಿರ್ಭಿಡೆಯಿಂದ ಖಂಡಿಸಿದಂತೆ ಭಕ್ತಿಸಂಪನ್ನರಾದ ಮುಗ್ಧಜನರು ಟೀಕಿಸಲು ಮುಂದಾಗುವುದಿಲ್ಲ. 'ಮಾಡಿದವರ ಪಾಪ ಆಡಿದವರ ಬಾಯಲ್ಲಿ' ಎಂದು ಹಿಂಜರಿಯುತ್ತಾರೆ. ಅವರ ಈ ಧೋರಣೆ ಪರಂಪರಾಗತವಾಗಿ ಮಾಡಿಕೊಂಡುಬಂದ ಬೋಧನೆಗೆ ಅನುಗುಣವಾಗಿಯೇ ಇದೆ. ಉದಾಹರಣೆಗೆ ಸ್ಕಂದಪುರಾಣಾಂತರ್ಗತವಾದ ಪ್ರಾಚೀನ ಗ್ರಂಥ 'ಸೂತಸಂಹಿತೆ'ಯಲ್ಲಿ ಬರುವ ಈ ಕೆಳಗಿನ ಶ್ಲೋಕವನ್ನು ಗಮನಿಸಿ:

**ದುರ್ವೃತ್ತೋ ವಾ ಸುವೃತ್ತೋ ವಾ**
**ಮೂರ್ಖೋ ವಾ ಪಂಡಿತೋಽಪಿ ವಾ ।**
**ವೇಷಮಾತ್ರೇಣ ಸಂನ್ಯಾಸೀ**
**ಪೂಜ್ಯಃ ಸರ್ವೇಶ್ವರೋ ಯಥಾ ॥**

ಅಂದರೆ ಸಾಧು-ಸಂನ್ಯಾಸಿಗಳು ಒಳ್ಳೆಯವರೋ ಕೆಟ್ಟವರೋ, ದಡ್ಡರೋ ಪಂಡಿತರೋ ಕಾವಿ ಧರಿಸಿದ ಕಾರಣ ಅವರನ್ನು ಗೌರವಿಸಬೇಕು, ಸಾಕ್ಷಾತ್ ಶಿವನೆಂದೇ ಆರಾಧಿಸಬೇಕು ಎಂದು ಬೋಧಿಸಲಾಗಿದೆ. ಹೀಗಾಗಿ ಭರತಖಂಡದ ಉದ್ದಗಲಕ್ಕೂ ಕಾವಿಧಾರಿಗಳಿಗೆ ಎಲ್ಲಿಲ್ಲದ ಗೌರವ ಮತ್ತು ವಿಶೇಷ ಮನ್ನಣೆ. ಅವರ ಪರಿಚಯ ಇರಲಿ ಇಲ್ಲದಿರಲಿ ಕಾವಿ ತೊಟ್ಟವರು ಕಂಡ ತಕ್ಷಣ ಕಾಲಿಗೆ ಅಡ್ಡಬೀಳುವ, ಕೈಜೋಡಿಸಿ ನಮಸ್ಕರಿಸುವ ಪದ್ಧತಿ ಪ್ರಾಚೀನಕಾಲದಿಂದಲೂ ಬೆಳೆದುಬಂದಿದೆ. ಇದೇ ರೀತಿ ಸ್ವತಂತ್ರಭಾರತದಲ್ಲಿ ರಾಜಕಾರಣಿಗಳು ಲಫಂಗರೋ, ಘಟಿಂಗರೋ, ದುಷ್ಟರೋ

ಭ್ರಷ್ಟರೋ ಸಾರ್ವಜನಿಕ ವೇದಿಕೆಗಳಲ್ಲಿ ಅವರನ್ನು ಶಾಲು ಹೊದಿಸಿ ಸನ್ಮಾನಿಸುವ ಪದ್ಧತಿ ಮೇರೆ ಮೀರಿ ಬೆಳೆದಿದೆ. ಮಠ-ಮಂದಿರಗಳಲ್ಲಿ, ವಿಮಾನ ನಿಲ್ದಾಣಗಳಲ್ಲಿ ಸ್ವಾಮಿಗಳು ಎದುರಾದರೆ ಅವರನ್ನು ನೋಡಿ ಸಹಪ್ರಯಾಣಿಕರಾದ ತಾಯಂದಿರು ತಮ್ಮ ಮಕ್ಕಳಿಗೆ 'ಜಯ್ ಕರೋ ಬೇಟಾ' ಎಂದು ಒತ್ತಾಯಿಸುತ್ತಾರೆ. 'Security Check' ಮಾಡುವ ಅಧಿಕಾರಿಗಳು ಅಂಜುತ್ತಲೇ ಕರ್ತವ್ಯದೃಷ್ಟಿಯಿಂದ ತಪಾಸಣೆ ನಡೆಸುತ್ತಾರೆ. ನಂತರ 'ಬಾಬಾ ಮುಝೆ ಆಶೀರ್ವಾದ್ ದೋ' ಎಂದು ಕೈಜೋಡಿಸಿ ಬೇಡುತ್ತಾರೆ. ಇನ್ನು ಮುಂದೆ ಯಾರನ್ನೇ ಗುರುವೆಂದು ಸ್ವೀಕರಿಸುವ ಮುಂಚೆ ಹೀಗೆ ವಿಮಾನನಿಲ್ದಾಣದ ತನಿಖಾಧಿಕಾರಿಗಳು ಮಾಡುವಂತೆ ಭಕ್ತರು ಎಚ್ಚರ ವಹಿಸಬೇಕೆಂದು ತೋರುತ್ತದೆ.

ಜನರಿಗೆ ನೀತಿಪಾಠವನ್ನು ಹೇಳಿಕೊಡಬೇಕಾದ ಸ್ವಾಮಿಗಳೇ ಅನೀತಿಯುತವಾದ ದಾರಿಯನ್ನು ತುಳಿದರೆ ಹೇಗೆ? ಪ್ರಾಚೀನ ಕಾಲದ ಅನೇಕ ಋಷಿಮುನಿಗಳ ಜೀವನವೃತ್ತಾಂತವನ್ನು ನೋಡಿದರೆ ಅವರು ಆರಂಭದಲ್ಲಿ ಅಡ್ಡದಾರಿಯನ್ನು ತುಳಿದಿದ್ದರೂ ನಂತರ ಜಪತಪಾದಿಗಳಿಂದ ಸುದೀರ್ಘಕಾಲ ದೇಹ ಮತ್ತು ಮನಸ್ಸನ್ನು ದಂಡಿಸಿ ಋಜುಮಾರ್ಗದಲ್ಲಿ ನಡೆದು ಪೂಜನೀಯರಾಗಿದ್ದಾರೆ. 'ನದಿಮೂಲ ಋಷಿಮೂಲ ನೋಡಬಾರದು' ಎಂಬ ಗಾದೆ ಮಾತು ಈ ಹಿನ್ನೆಲೆಯಲ್ಲಿ ಬಂತೆಂದು ತೋರುತ್ತದೆ. ಹೆಚ್ಚುಕಡಿಮೆ ಇದೇ ಅರ್ಥವನ್ನು ಹೋಲುವ ಅಪರೂಪದ ಮಾತೊಂದು ಆಂಗ್ಲಭಾಷೆಯಲ್ಲಿದೆ: "Every saint has a past; every sinner has a future!" ಸಾರ್ವಜನಿಕ ವೇದಿಕೆಗಳಲ್ಲಿ ಸನ್ಮಾನ ಪಡೆಯುವ ಭ್ರಷ್ಟ ರಾಜಕಾರಣಿಗಳು ತಮ್ಮ ನಡೆ-ನುಡಿಗಳನ್ನು ತಿದ್ದಿಕೊಳ್ಳುತ್ತಾರೋ ಇಲ್ಲವೋ ಅವರು ಬಹಳ ಕಾಲ ಅಧಿಕಾರದಲ್ಲಿ ಇರುವುದಿಲ್ಲ. ಆದರೆ ಧಾರ್ಮಿಕರಂಗದಲ್ಲಿ ಸದಾ ಪೂಜನೀಯ ಸ್ಥಾನವನ್ನು ಪಡೆದ ಸ್ವಾಮಿಗಳು, ಮಠಾಧೀಶರು ಆತ್ಮನಿರೀಕ್ಷಣೆ ಮಾಡಿಕೊಳ್ಳುವುದು ಒಳಿತು. ಇಲ್ಲದೇ ಹೋದರೆ ಶಿಷ್ಯರ ಭಕ್ತಿಭಾವನೆಗಳಿಗೆ ದ್ರೋಹ ಬಗೆದಂತಾಗುತ್ತದೆ. ಮಠಗಳು ಮತ್ತು ದೇವಾಲಯಗಳು ಜನರ ಧಾರ್ಮಿಕ ಶ್ರದ್ಧಾಕೇಂದ್ರಗಳು. ಸಾಂಸಾರಿಕ ಜೀವನದಲ್ಲಿ ಬೇಸತ್ತ ಜನ ಮನಃಶಾಂತಿಯನ್ನು ಬಯಸಿ ಬರುತ್ತಾರೆ. ಅಂಥವರ ಧಾರ್ಮಿಕ ಶ್ರದ್ಧೆಯನ್ನೇ ಬುಡಮೇಲಾಗಿಸಿ ಜೀವನದಲ್ಲಿ ದಿಕ್ಕೇ ತೋಚದಂತೆ ಮಾಡುವುದು ಹೇಯಕೃತ್ಯ. ನಡುರಾತ್ರಿಯಲ್ಲಿ ಮನೆ ನುಗ್ಗಿ ನಗನಾಣ್ಯ ದೋಚಿಕೊಂಡು ಹೋಗುವ ದರೋಡೆಕೋರರು ಎಷ್ಟೋ ವಾಸಿ. ಕಳೆದು ಹೋದ ಧನ-ಕನಕ-ಸಂಪತ್ತನ್ನು ಮತ್ತೆ ದುಡಿದು ಸಂಪಾದಿಸಬಹುದು. ಆದರೆ ಜೀವನದಲ್ಲಿ ನೆಮ್ಮದಿಯನ್ನು ಅರಸಿ ಬಂದ ಜನರ ಭಕ್ತಿಭಾವನೆಗಳೊಂದಿಗೆ ಚೆಲ್ಲಾಟವಾಡುವ ಕಪಟ ಸಾಧು-ಸಂನ್ಯಾಸಿಗಳನ್ನು ಧಾರ್ಮಿಕ ದರೋಡೆಕೋರರು ಎನ್ನಬೇಕಾಗುತ್ತದೆ. ಇಂಥವರನ್ನು ಕಂಡೇ ದೇವರದಾಸಿಮಯ್ಯನವರು ಹೇಳಿದ್ದು: 'ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು'. ಮಠದಲ್ಲಿರುವ ಸ್ವಾಮಿಗಳು ಸಂನ್ಯಾಸದೀಕ್ಷೆಯನ್ನು ತೆಗೆದುಕೊಂಡು ಧ್ಯಾನಮಾಡುತ್ತಿದ್ದರೆ ಮಠದಲ್ಲಿರುವ ಬೆಕ್ಕು ಕಣ್ಮುಚ್ಚಿ ಧ್ಯಾನಮಾಡುತ್ತಿದೆಯೆಂದು ಭಾವಿಸುವುದು ತಪ್ಪು. ಅದರ ಧ್ಯಾನ ಮಠದ ಮೂಲೆಯಲ್ಲಿ ಇಲಿ ಕಾಣುವವರೆಗೆ ಮಾತ್ರ. ಅಂತಹ ಬೆಕ್ಕುಗಳು ಈಗ ಅನೇಕ ಮಠಗಳಲ್ಲಿರುವುದು ತುಂಬಾ ವಿಷಾದನೀಯ. ಈ ಕೆಳಗಿನ ಸುಭಾಷಿತವನ್ನು ಗಮನಿಸಿ:

> **ಕೇಶಾಃ ಕಿಂ ಅಪರಾಧ್ಯಂತೇ ಕ್ಲೇಶಾನಾಂ ಮುಂಡನಂ ಕುರು ।**
> **ಸಕಷಾಯಸ್ಯ ಚಿತ್ತಸ್ಯ ಕಾಷಾಯೈಃ ಕಿಂ ಪ್ರಯೋಜನಂ ॥**
>
> **(ನಿನ್ನ ತಲೆಗೂದಲು ತಪ್ಪೇನು ಮಾಡಿವೆ**
> **ನಿನ್ನ ಮನಸ್ಸನ್ನು ಬೋಳಿಸು**
> **ತಲೆಯ ತುಂಬ ವಿಷಯವಾಸನೆ ತುಂಬಿಕೊಂಡರೆ**
> **ಕಾಷಾಯವಸ್ತ್ರಗಳಿಂದೇನು ಪ್ರಯೋಜನ?)**

ಇದನ್ನೇ ಆದಿಶಂಕರರು ಬೋಧಿಸಿದ್ದು 'ಉದರನಿಮಿತ್ತಂ ಬಹುಕೃತವೇಷಂ'

ವಿಚಾರವಾದಿಗಳೆನಿಸಿದ ಬಸವಣ್ಣನವರು ಕಪಟಲಾಂಛನಧಾರಿಗಳಿಂದ ಮೋಸಹೋದ ಪ್ರಕರಣಗಳು ಹೇರಳವಾಗಿವೆ. ಅವರ ಪತ್ನಿ ನೀಲಲೋಚನೆ ಮಲಗಿದ್ದಾಗ ಕಿವಿಯಲ್ಲಿದ್ದ ಓಲೆಗಳನ್ನು ಕಿತ್ತುಕೊಳ್ಳುವ ವಿಫಲಪ್ರಯತ್ನವನ್ನು ಕಪಟಜಂಗಮವೇಷಧಾರಿಯೊಬ್ಬ ಮಾಡಿದ. ಈ ವಿಚಾರ ಭೀಮಕವಿಯ ಬಸವಪುರಾಣ ಇತ್ಯಾದಿ ಗ್ರಂಥಗಳಲ್ಲಿ ಬರುತ್ತದೆ. ಬಸವಣ್ಣನವರನ್ನು ನಂಬಿಸಲು ಆ ಕಳ್ಳ ಕೊರಳಲ್ಲಿ ಬದನೆಕಾಯಿಯನ್ನು ಲಿಂಗವೆಂಬಂತೆ ಕಟ್ಟಿಕೊಂಡು ಬಂದಿದ್ದನಂತೆ! ಬಸವಣ್ಣನವರು ಆ ಕಳ್ಳನನ್ನು ಬಂಧಿಸಲು ಕಾವಲುಗಾರರಿಗೆ ಹೇಳುವುದಿಲ್ಲ. ಅಗತ್ಯಕ್ಕಿಂತ ಹೆಚ್ಚಿನದನ್ನು ಇಟ್ಟುಕೊಂಡ ತನ್ನನ್ನೇ ದೊಡ್ಡ ಕಳ್ಳನೆಂದು ಪರಿಗಣಿಸಿ 'ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಆತ ಕೂಡಲಸಂಗನಲ್ಲದೆ ಬೇರೆಯಲ್ಲ' ಎಂದು ಕಿವಿಯಲ್ಲಿದ್ದ ಓಲೆಯನ್ನು ಅವನಿಗೆ ತೆಗೆದುಕೊಡಲು ತನ್ನ ಮಡದಿಯನ್ನೇ ಗದರಿಸಿದರಂತೆ! ಲಿಂಗಧಾರಿಗಳೆಲ್ಲರನ್ನೂ ಜಂಗಮರೆಂದು ನಂಬಿ ಆರಾಧಿಸುತ್ತಿದ್ದ ಬಸವಣ್ಣನವರ ಬೋಳೆಸ್ವಭಾವ ಅವರ ಈ ಕೆಳಗಿನ ವಚನದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ:

> **ಎಡದ ಕೈಯಲಿ ಕತ್ತಿ, ಬಲದ ಕೈಯಲಿ ಮಾಂಸ**
> **ಬಾಯಲ್ಲಿ ಸುರೆಯ ಗಡಿಗೆ, ಕೊರಳಲ್ಲಿ ಲಿಂಗವಿರಲು**
> **ಅವರ ಲಿಂಗನೆಂಬೆ, ಸಂಗನೆಂಬೆ!**

ಇನ್ನೊಂದು ವಿಚಿತ್ರ ಪ್ರಸಂಗ ಹರಿಹರನ 'ಬಸವರಾಜದೇವರ ರಗಳೆ'ಯಲ್ಲಿ ಬರುತ್ತದೆ. ಒಂದು ರಾತ್ರಿ ಶಿವನು ತರುಣಜಂಗಮವೇಷಧಾರಿಯಾಗಿ ಬರುತ್ತಾನೆ. ಬಸವಣ್ಣ ಭಕ್ತಿಯಿಂದ ಅವನ ಪಾದಪೂಜೆಯನ್ನು ಮಾಡಿ ಆರೋಗಣೆ ಮಾಡಿಸಿ ಮಂಚದಲ್ಲಿ ಮಲಗಿಸಿ ಪಾದಗಳನ್ನು ಒತ್ತುತ್ತಾನೆ. ಆ ತರುಣ ಜಂಗಮ 'ಎಲೆ ಬಸವರಾಜಾ, ನಾವು ಹೆಂಗೂಸಿಲ್ಲದೆ ಇರ್ದುದಿಲ್ಲಾ' ಎಂದು ನಾಚಿಕೆಯಿಲ್ಲದೆ ಹೇಳಿ ಅಂಗನೆಯ ಸುಖವನ್ನು ಬಯಸುತ್ತಾನೆ. ಆ ಜಂಗಮನನ್ನು ತೃಪ್ತಿಪಡಿಸಲು ಬಸವಣ್ಣ ತನ್ನ ಪರಿಚಾರಕರನ್ನು ಪಟ್ಟಣದೊಳಗೆ ವೇಶ್ಯೆಯೊಬ್ಬಳನ್ನು ಕರೆತರಲು ಹೇಳಿ ಕಳುಹಿಸಿದ. ಎಲ್ಲಾ ವೇಶ್ಯಾಗೃಹಗಳೂ ವಿಟರಿಂದ ತುಂಬಿದ್ದರಿಂದ ಯಾರೂ ಸಿಗಲಿಲ್ಲವಂತೆ. ಈ ಪ್ರಸಂಗವನ್ನು ನಮ್ಮ ಪ್ರಾಧ್ಯಾಪಕರಾಗಿದ್ದ ಡಾ. ಪ್ರಭುಶಂಕರ ಅವರು ತಮ್ಮ 'ಬೆರಗು' ಎಂಬ ವಿಶಿಷ್ಟ ಶೈಲಿಯ ಗ್ರಂಥದಲ್ಲಿ ಬಸವಣ್ಣನವರ ಪತ್ನಿ ನೀಲಲೋಚನೆಯ ಮಾತುಗಳಲ್ಲಿ ಆಧುನಿಕ ಗೃಹಿಣಿಯರು ತಮ್ಮ ಗಂಡಂದಿರನ್ನು ಮಾತನಾಡುವ ರೀತಿಯಲ್ಲಿ ತುಂಬಾ ಸ್ವಾರಸ್ಯಕರವಾಗಿ ಚಿತ್ರಿಸಿದ್ದಾರೆ:

“ಇಲ್ಲಿಗೆ ಎಂಥೆಂಥ ಜನ ಬರ್ತಾರೇಂತ ಹೇಳಿದರೆ ನೀವು ನಂಬೋದೇ ಇಲ್ಲ. ಕಳ್ಳರು, ಸುಳ್ಳರು, ದರೋಡೆ ಮಾಡೋರು ಎಲ್ಲಾ ಬರ್ತಾರೆ. ಜಂಗಮರ ವೇಷ ಹಾಕೋದು ಒಂದು ಮಹಾ ಕಷ್ಟಾನೆ? ಹಾಕ್ಕೊಂಡ್ರು, ಬಂದ್ರು. ಇವರಿಗೆ (ಬಸವಣ್ಣನವರಿಗೆ) ಅದೆಲ್ಲಾ ಗೊತ್ತಾದರೆ ತಾನೆ? ಹೋಗಲಿ, ಹೇಳಿದೆವು ಅಂತ ಇಟ್ಕೊಳ್ಳಿ. ಕಿವೀ ಮೇಲೂ ಹಾಕ್ಕೋಳಲ್ಲ, ನಂಬೋದೂ ಇಲ್ಲ….. ತಿಂಗಳ ಹಿಂದೆ ಒಬ್ಬ ಬಂದ. ತಿಂದು ಉಂಡು ಹೊರವಾಗಿ ಬೆಳೆದಿದ್ದ. ಉಡುಪೋ ಒನಪೋ ದೇವರಿಗೇ ಪ್ರೀತಿ. ರಾತ್ರಿ ಪೂಜೆ ಆಯಿತು, ಊಟ ಆಯಿತು. ಕಾಮಣ್ಣನ ಹಾಗೆ ಇದ್ದ ಅವನು ಇವರ ಮುಂದೆ ಪಿಸುಗುಟ್ಟಿದನಂತೆ: ‘ನಾನು ರಾತ್ರಿ ಒಬ್ಬನೇ ಮಲಗಿ ರೂಢಿಯಿಲ್ಲ’ ಅಂತ. ಇವರು ಅವನಿಗೆ ಏನು ಮಾತುಕೊಟ್ಟರೋ ನನಗೆ ಗೊತ್ತಿಲ್ಲ. ನನ್ನ ಮುಂದೆ ಬಂದು ಅವನು ಹೇಳಿದ್ದನ್ನ ತೊದಲಿದರು. ನನಗೆ ಮೈಮೇಲೆ ಪ್ರಜ್ಞೆಯೇ ಹೋಯಿತು. ಮುಳ್ಳು ಹಂದಿಯಾದೆ. ಹೇಳಿದೆ: ‘ಒಬ್ಬನೇ ಮಲಗೋದಕ್ಕೆ ಭಯ ಆದರೆ ಈ ನಿಮ್ಮ ಪಶುಪತಿ ನಮ್ಮ (ದನದ) ಕೊಟ್ಟಿಗೇಲಿ ಮಲಗಲಿ. ಅಲ್ಲಿ ಅವನ ಸಂಬಂಧಿಗಳಿದ್ದಾರೆ’. ಇವರು ಕಿಡಿಕಿಡಿಯಾದರು. ‘ಜಂಗಮರನ್ನ ಏಕವಚನದಲ್ಲಿ ಕರೆದದ್ದೂ ಅಲ್ಲದೆ ಅವರಿಗೆ ಅವಮಾನ ಬೇರೆ ಮಾಡುತ್ತೀಯಾ’ ಎಂದೆಲ್ಲಾ ರೇಗಾಡಿದರು. ಅವರು ಹಾಗೆ ರುದ್ರಾವತಾರ ತಾಳಿದ್ದನ್ನು ನಾನು ಎಂದೂ ನೋಡಿರಲಿಲ್ಲ. ‘ಅವರು ಸಾಕ್ಷಾತ್ ಶಿವ’ ಎಂದರು. ನಾನು ಹೇಳಿದೆ: ‘ನನಗೆ ಗೊತ್ತಿರೋ ಶಿವ ಒಬ್ಬನೇ. ಅದು ನೀವು. ಇನ್ನೊಬ್ಬ ಇದ್ದರೆ ಅವನು ಕೈಲಾಸದಲ್ಲಿರಬೇಕು. ಅವನಿಗೆ ಇಲ್ಲೇನು ಕೆಲಸ? ಅವನಿಗೆ ಒಬ್ಬಳಲ್ಲ ಅಂತ ಇಬ್ಬರು ಹೆಂಡರಿದ್ದಾರೆ. ಇದ್ದೂ ಮೂರನೆಯವಳ ಮೇಲೇಕೆ ಕಣ್ಣು? ಆ ಚಂಡಾಲನನ್ನು ಒದ್ದು ಹೊರಕ್ಕೆ ಹಾಕುತ್ತೀರೋ, ಇಲ್ಲ ನಾನೇ ಆ ಕೆಲಸ ಮಾಡಲೋ?’ ಆದರೆ ಅಷ್ಟರಲ್ಲಿ ಈ ಗಲಾಟೆ ಕೇಳಿದ ವಿಭೂತಿ ಪುರುಷ ಕಾಲಿಗೆ ಬುದ್ಧಿ ಹೇಳಿದ್ದ”.

ಕೊರಳಲ್ಲಿ ಲಿಂಗಧರಿಸಿದವರನ್ನೆಲ್ಲಾ ಜಂಗಮರೆಂದು ಸಾಕ್ಷಾತ್ ಶಿವನಸ್ವರೂಪಿಗಳೆಂದು ಪರಿಭಾವಿಸುತ್ತಿದ್ದ ಬಸವಣ್ಣನವರು ಕಾಲಕ್ರಮೇಣ ತಮ್ಮ ನಿಲುವನ್ನು ಬದಲಾಯಿಸಿಕೊಂಡಂತೆ ತೋರುತ್ತದೆ. ಒಂದು ಹಂತದಲ್ಲಿನ ಅವರ ಭಾವುಕತೆ ವೈಚಾರಿಕತೆಯ ಮೆರುಗನ್ನು ಪಡೆದಾಗ ಅವರ ಬಾಯಿಂದ ಹೊರ ಬಂದ ಈ ಕೆಳಗಿನ ವಚನ ಇಂದಿಗೂ ಪ್ರಸ್ತುತವಾಗಿದೆ:

**ಲಾಂಛನಕ್ಕೆ ಶರಣೆಂಬೆ**
**ಲಾಂಛನಕ್ಕೆ ತಕ್ಕ ಆಚರಣೆ ಇಲ್ಲದಿದ್ದರೆ**
**ಕೂಡಲ ಸಂಗಮದೇವಾ**
**ನೀ ಸಾಕ್ಷಿಯಾಗಿ ‘ಛೀ’ ಎಂಬೆ!**

10.3.2010

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑